**<u>ದಿನಾಂಕಃ 16.07.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ವಕೀಲರು ಶ್ರೀಃ ಎ.ಎ.ಎಸ್. ರವರಿಂದ.</u>**

1. ವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇದೆ. ವಾದ ಪತ್ರದಲ್ಲಿ ಏನು ಬರೆದಿದೆ ಎಂದು ಓದಿ ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ. ನಾನು ನನ್ನ ವಕೀಲರಿಗೆ ನೀಡಿದ ಎಲ್ಲಾ ಮಾಹಿತಿ ವಾದ ಪತ್ರದಲ್ಲಿ ಉಲ್ಲೇಖವಾಗಿದೆ. ವಾದ ಪತ್ರದ ಜೊತೆ ಯಾವ ದಾಖಲೆಗಳನ್ನು ಹಾಜರುಪಡಿಸಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ನನಗೆ ದಾವಾ ಸ್ವತ್ತು ಸಿ.ಟಿ ಸರ್ವೇ ವ್ಯಾಪ್ತಿಗೆ ಬರುತ್ತದೊ ಇಲ್ಲವೊ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ, ಸಾಕ್ಷಿ ಮುಂದುವರೆದು ಪ್ಲಾಟ್ ನಂಬರ್ ಬರೆಸಿದ್ದೇನೆ ಎನ್ನುತ್ತಾರೆ. ದಾವೆಯಲ್ಲಿ ಸದರಿ ಸ್ವತ್ತು NA ಮತ್ತು ಲೇಔಟ್ ಆಗಿದೆ ಎಂದು ಉಲ್ಲೇಖವಾಗಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. NA ಮತ್ತು ಲೇಔಟ್ ಆಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದ ಪತ್ರದ ಜೊತೆಗೆ ಹಾಜರುಪಡಿಸಲಾದ ಹಾತ್ ನಕಾಶೆಯನ್ನು ಈಗಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಒಪ್ಪಿದ್ದಾರೆ ಸದರಿ ಹಾತ್ ನಕಾಶೆಯನ್ನು ನ್ಯಾಯಾಲಯಕ್ಕೆ ಸಾಕ್ಷ್ಯಗಳ ಅವಲೋಕನೆಗೆ ಬೇಕಾಗಿ ನಿಸಿ-1 ಎಂದು ಗುರುತಿಸಲಾಯಿತು. ಹಾತ್ ನಕಾಶೆಯಲ್ಲಿ ಉತ್ತರ ದಿಕ್ಕಿಗೆ 40 feet ಅಗಲದ ರಸ್ತೆ ಇದೆ ಎಂದರೆ ಸರಿ. ಸಾಕ್ಷಿಯು ಹಾತ್ ನಕಾಶೆಯಲ್ಲಿ ತನ್ನ ಸ್ವತ್ತನ್ನು ಗುರುತಿಸಿರುತ್ತಾರೆ. ನಾನು ಹಾಗೂ ಇನ್ನುಳಿದ ಇಬ್ಬರು ವಾದಿಯರು ಉತ್ತರ ದಿಕ್ಕಿಗೆ ಇರುವ ರಸ್ತೆಯನ್ನು ಉಪಯೋಗಿಸಲು 5 ಅಡಿ ಜಾಗ ಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ಪ್ರಸ್ತುತ ಹಾತ್ ನಕಾಶೆಯಲ್ಲಿ ತೋರಿಸಿರುವಂತೆ ಖುಲ್ಲಾ ಜಾಗ ಇರುತ್ತದೆ ಅದು ಸರ್ಕಾರಿ ಜಾಗವಾಗಿರುತ್ತದೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇಳಿ ಕೇಳಿ ಸರಿಯಿದೆ.

ಸಹಿ/-

**4ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ,**
**ಮತ್ತು ಪ್ರ.ದ.ನ್ಯಾ.ದಂ. ಬೆಳಗಾವಿ.**